2ನೇ ಅಪರ ಮುಖ್ಯ ಮಹಾನಗರ  ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ
ಸಿ.ಸಿ.ನಂಃ 24329 ಃ 2019

| | | | |
|---|---|---|---|
| ಸಾಕ್ಷಿದಾರನ ಹೆಸರು | ದಿವ್ಯಶ್ರೀ ಬಿ ಹೆಚ್ | ಸಿ ಡಬ್ಲ್ಯು | 1 |
| ಗಂಡನ ಹೆಸರು | ಸುಭಾಷ್ ಎಮ್ | ಪಿ ಡಬ್ಲ್ಯು | 1 |
| ವಯಸ್ಸು | 44 ವರ್ಷ | | |
| ಉದ್ಯೋಗ | ಡಿ.ವೈ.ಎಸ್.ಪಿ | | |
| ವಾಸಸ್ಥಾನ | ಪುತ್ತೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 17.01.2026

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ನಾನು 2012 ರಿಂದ 2021 ರವರೆಗೆ ಜಯನಗರ ಅಬಕಾರಿ ಪೊಲೀಸ್ ಠಾಣೆಯಲ್ಲಿ ಅಬಕಾರಿ ನೀರಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ15.12.2014 ರಂದು ರಾತ್ರಿ 10.30 ಗಂಟೆಗೆ ನಾನು, ಚಾಸಾ 4 ರಿಂದ 10 ರವರು  ಗಸ್ತು ಮಾಡುತ್ತಿದ್ದಾಗ ಜಯನಗರ 28ನೇ ಕ್ರಾಸ್ ಬಸ್ ನಿಲ್ದಾಣದ ಹತ್ತಿರ ಒಬ್ಬ ಆಸಾಮಿಯು ಕುಡಿದು ಬಂದು ರಕ್ಷಣಾ ಸಿಬ್ಬಂದಿಗೆ ಮಾತ್ರ ಸೀಮಿತವಾದ ಮದ್ಯದ  ಬಾಟಲಿಗಳನ್ನು ಸಾಗಾಣಿಕೆ ಮತ್ತು ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು, ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ನಾವು ಸ್ಥಳಕ್ಕೆ 11.00 ಗಂಟೆಗೆ ಹೋದಾಗ ಅಲ್ಲಿ ಇಬ್ಬರು ಈ ಪ್ರಕರಣದ ಆಸಾಮಿಗಳು ಇದ್ದರು. ಆರೋಪಿಗಳು ಕೆಎ 05 9597 ಹುಂಡೈ ಕಾರಿನಲ್ಲಿ ಹೋಗುತ್ತಿದ್ದು ನಾವು ಅವರನ್ನು ತಡೆ ಹಿಡಿದು ವಿಚಾರಿಸಲಾಗಿ ಸದರಿ ಕಾರಿನಲ್ಲಿ ಹಿಂದಿನ ಸೀಟಿನಲ್ಲಿ 1ನೇ ಆರೋಪಿಯು ಆಂಟಿ ಕ್ವಿಟಿ ಬ್ಲೂ ವಿಸ್ಕಿ 750 ಎಮ್ ಎಲ್ ನ 11 ಬಾಟಲ್, ಬ್ಲಾಕ್ ಅಂಡ್ ವೈಟ್ ವಿಸ್ಕಿ  750 ಎಮ್ ಎಲ್ ನ  9 ಬಾಟಲ್, ರಾಯಲ್ ಚಾಲೆಂಜ್ ವಿಸ್ಕಿ 750 ಎಮ್ ಎಲ್ ನ  9 ಬಾಟಲ್, ರಾಯಲ್ ಸ್ಟಾಗ್ ವಿಸ್ಕಿ 750 ಎಮ್ ಎಲ್ ನ  16 ಬಾಟಲ್, 100 ಪೈಪರ್ಸ್ ವಿಸ್ಕಿ  750 ಎಮ್ ಎಲ್ ನ 7 ಬಾಟಲ್, ಒಟ್ಟು 39 ಬಾಟಲ್‌ಗಳು, ಪ್ರತಿ ಬ್ರಾಂಡ್ ನಂತೆ 2 ಬಾಟಲ್ ಗಳನ್ನು ಪ್ರಯೋಗಕ್ಕೆ ಪಡೆದುಕೊಳ್ಳಲಾಯಿತು. ಆರೋಪಿತರು ಯಾವುದೇ ಪರವಾನಿಗೆ ರಹದಾರಿ ಹಾಜರುಪಡಿಸಿರುವುದಿಲ್ಲ. ನಂತರ ಸ್ಥಳದಲ್ಲಿಯೇ ರಾತ್ರಿ 11.00 ರಿಂದ 12.00 ಗಂಟೆಯವರೆಗೆ ಪಂಚನಾಮೆ ಮಾಡಿ ಬಾಟಲ್ ಗಳನ್ನು ಇಲಾಖೆಯ ಸೀಲ್ ನಿಂದ ಸೀಜ್ ಮಾಡಲಾಯಿತು. 1ನೇ ಆರೋಪಿಯು ಸದರಿ ವಸ್ತುಗಳನ್ನು

ತನ್ನ ಮನೆಯಿಂದ ತಂದಿದ್ದು ಎಂದು ತಿಳಿಸಿದ್ದು ಅದರಂತೆ ಎಲ್ಲರೂ ಸೇರಿ 22ನೇ ಮೇನ್, 28ನೇ ಕ್ರಾಸ್, 4ನೇ ಡಿ ಬ್ಲಾಕ್ ಜಯನಗರ ಕ್ಕೆ 12.30 ಸಮಯಕ್ಕೆ ಹೋಗಿ ಆರೋಪಿಯು ಸ್ವತಃ ತನ್ನ ಮನೆಯ ಬೀಗ ತೆಗೆದು ಮನೆಗೆ ಕರೆದುಕೊಂಡು ಹೋಗಿ ಕಾಲಾವಕಾಶ ಇಲ್ಲದೇ ಇದ್ದುದ್ದರಿಂದ ಶೋಧನ ಸಮುಚಿತ ವರದಿಯನ್ನು ಪಡೆದುಕೊಂಡು ಪಂಚರ ಸಹಿಯನ್ನು ಪಡೆದು ಮನೆಯನ್ನು ಪರಿಶೀಲಿಸಲಾಗಿ ಮನೆಯ ಎಡಭಾಗದ ಕೊಠಡಿಯಲ್ಲಿ ಟೀಚರ್ಸ್ 50 ವಿಸ್ಕಿ 2 ಬಾಟಲ್‌ಗಳು, ಟೀಚರ್ಸ್ ಹೈಲ್ಯಾಂಡ್ ವಿಸ್ಕಿ 6 ಬಾಟಲ್‌ಗಳು, ಬ್ಲಾಕ್ ಡಾಗ್ ವಿಸ್ಕಿ 5 ಬಾಟಲ್ ಗಳು, ಮೆಕ್ ಡಾವಲ್ ವಿಸ್ಕಿ 2 ಬಾಟಲ್‌ಗಳು, ರಾಯಲ್ ಸ್ಟಾಗ್ ವಿಸ್ಕಿ 7 ಬಾಟಲ್‌ಗಳು, 100 ಪೈಪರ್ಸ್ ವಿಸ್ಕಿ 3 ಬಾಟಲ್ ಗಳು, ಮಾರ್ಫೀಸ್ ಬ್ರಾಂಡಿ ವಿಸ್ಕಿ 4 ಬಾಟಲ್‌ಗಳು ಇದ್ದು ಎಲ್ಲಾ ಬಾಟಲ್ ಗಳ ಮೇಲೆ ಫರ್ ಡಿಫೆನ್ಸ್ ಎಂದು ನಮೂದಾಗಿರುತ್ತದೆ. ಒಟ್ಟು 29 ಬಾಟಲ್‌ಗಳನ್ನು 12.30 ರಿಂದ 2.30 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಎರಡು ಬಾಟಲ್ ಗಳನ್ನು ಪರೀಕ್ಷೆಗಾಗಿ ಪಡೆದುಕೊಂಡು ಸೀಲ್ ಮಾಡಿ ಆರೋಪಿ ವಾಹನ ಮತ್ತು ಮಾಲನ್ನು ಠಾಣೆಗೆ ಕರೆದುಕೊಂಡು ಹೋಗಿ ದೂರು ದಾಖಲಿಸಿರುತ್ತೇನೆ. ಮುಂದಿನ ತನಿಖೆಗಾಗಿ ಚಾಸಾ 10 ರವರಿಗೆ ವಹಿಸಿಕೊಟ್ಟಿರುತ್ತೇನೆ.

ಈ ಹಂತದಲ್ಲಿ ದಾಖಲೆಗಳನ್ನು ಹಾಜರುಪಡಿಸಲು ಸಮಯ ಕೋರಿದ್ದು ಮುಂದುವರೆದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)
2ನೇ ಅ ಮು ನ್ಯಾ ದಂ.